## ಕಥೋಪದೇಶ

# ಕರ್ತವ್ಯವನ್ನು ಬಿಡದಿರು

**ಜ್ಯೋತಿಷಿಯೊಬ್ಬರು** ತಮ್ಮ ಪ್ರವಾಸ ಕಾಲದಲ್ಲಿ ಹಳ್ಳಿಯೊಂದರಲ್ಲಿ ಉಳಿಯಬೇಕಾಯಿತು. ತಾವು ಹೊರಡುವ ಮೊದಲು ಆ ಊರಿನವರನ್ನೆಲ್ಲ ಸೇರಿಸಿ, ಆ ವರ್ಷದ ಮಳೆ ಬೆಳೆಯ ಬಗ್ಗೆ ಭವಿಷ್ಯ ಹೇಳುವುದಾಗಿ ತಿಳಿಸಿದರು. ಜನರು ಕುತೂಹಲದಿಂದ ಈ ವರ್ಷ ನಮ್ಮೂರಿನಲ್ಲಿ ಮಳೆ ಹೇಗೆ? ಎಂದು ವಿಚಾರಿಸಿದರು. ಜ್ಯೋತಿಷಿಯು ನಿಟ್ಟುಸಿರಿಟ್ಟು "ಮಹನೀಯರೇ, ಹೇಗೆ ಹೇಳಲಿ, ಈ ವರ್ಷ ನಿಮ್ಮೂರಿಗೆ ಮಳೆ ಬೀಳುವ ಯೋಗವಿಲ್ಲವಲ್ಲ" ಎಂದು ಹೇಳಿದನು. ನಿರಾಶೆಗೊಂಡ ಜನರು ಅದಕ್ಕೆ ಪರಿಹಾರವಿಲ್ಲವೇ? ಎಂದು ಕೇಳಿದರು. ಜ್ಯೋತಿಷಿಯು "ದೇವಾಲಯದಲ್ಲಿ ಪರ್ಜನ್ಯಜಪ ಮತ್ತು ಹೋಮಗಳನ್ನು ಮಾಡಿದರೆ ಮಳೆ ಬರುವ ಸಂಭವವಿದೆ" ಎಂದು ಹೇಳಿ ಆ ಊರಿನಿಂದ ಮುಂದಕ್ಕೆ ಪ್ರಯಾಣ ಮಾಡಿದನು. ಇತ್ತ ಆ ಊರಿನ ಜನರು ಹೇಗೂ ಮಳೆ ಬರುವುದು ಅನುಮಾನ. ಜ್ಯೋತಿಷ್ಯ ಸುಳ್ಳಾಗುವುದೇ? ಎಂದು ತಮ್ಮ ತಮ್ಮಲ್ಲಿ ಮಾತನಾಡಿಕೊಂಡರು. "ಮಳೆ ಬರೋಲ್ಲ ಎಂದಮೇಲೆ, ನಾವು ಸುಮ್ಮನೆ ಹೊಲ ಉಳುವುದೇಕೆ? ಬೀಜ ಬಿತ್ತುವುದೇಕೆ? ಬೀಜ, ಗೊಬ್ಬರ ದಂಡ ಮಾಡಿಕೊಳ್ಳುವುದೇಕೆ"ಎಂದುಕೊಂಡು ಯಾರೂ ಹೊಲಗಳ ಕಡೆ ಹೋಗಲೂ ಇಲ್ಲ, ಬಿತ್ತನೆ ಮಾಡಲೂ ಇಲ್ಲ. ಜ್ಯೋತಿಷಿ ಹೇಳಿದ ಜಪ, ಹೋಮಗಳನ್ನೂ ಮಾಡಲಿಲ್ಲ.

ಆದರೆ ಆ ಊರಿನ ಒಬ್ಬ ಹಿರಿಯ ರೈತನಿಗೆ, ಇವರ ನಿರ್ಧಾರ ಸರಿ ಎನಿಸಲಿಲ್ಲ. ಅವನು ತಾನೊಬ್ಬನೇ ಪ್ರತಿ ವರ್ಷದಂತೆ ಹೊಲಕ್ಕೆ ಹೋಗಿ ಉಳುಮೆ ಮಾಡಿ ಸಕಾಲದಲ್ಲಿ ಬೀಜವನ್ನು ಕೂಡಾ ಬಿತ್ತಿದ. ದೇವರಿಟ್ಟಂತೆ ಆಗಲಿ, ಎಂದು ದೇವರ ಮೇಲೆ ಭಾರಹಾಕಿ, ಎಂದಿನಂತೆ ದೇವರ ಧ್ಯಾನದಲ್ಲಿ ತೊಡಗಿದ್ದನು.

ಒಂದು ದಿನ ಆಕಾಶದಲ್ಲಿ ಇದ್ದಕ್ಕಿದ್ದಂತೆಯೇ ಕಾರ್ಮೋಡ ಕಾಣಿಸಿದವು. ಇದನ್ನು ಕಂಡ ರೈತನ ಆನಂದಕ್ಕೆ ಪಾರವೇ ಇರಲಿಲ್ಲ. ಕೂಡಲೇ ತನ್ನ ಹೊಲದ ಬಳಿ ಹೋಗಿ ಮಳೆ ಬರುವುದನ್ನೇ ನಿರೀಕ್ಷಿಸುತ್ತಾ ಆಕಾಶದ ಕಡೆ ನೋಡತೊಡಗಿದ. ಆಗ ಕರಿಯ ಮೋಡವೊಂದು ತನ್ನ ಕಡೆಗೇ ಇಳಿದು ಬಂದಂತಾಯಿತು. ಅದು ರೈತನನ್ನು ಕುರಿತು, "ಅಯ್ಯಾ, ಮಳೆ ಬರೋಲ್ಲ ಅಂತ ಎಲ್ಲರೂ ಸುಮ್ಮನೆ ಇದ್ದಾರೆ. ನೀನು ಯಾಕೆ ಇಷ್ಟೊಂದು ಕಷ್ಟ ಪಡ್ತೀಯಾ?" ಎಂದು ಪ್ರಶ್ನಿಸಿತು.

ರೈತನಿಗೆ ಕುತೂಹಲವಾಯಿತು. ಅವನು ಮೇಘರಾಜನೆಂದೇ ತಿಳಿದು, "ಮೇಘರಾಜ, ಪ್ರತಿ ವರ್ಷ ಉಳೋದು, ಬೀಜ ಬಿತ್ತೋದು ನನ್ನ ಕರ್ತವ್ಯ. ಅದಕ್ಕೆ ನಾನು ಈ ವರ್ಷವೂ ನನ್ನ ಕರ್ತವ್ಯ ಮಾಡಿದ್ದೇನೆ. ಮಳೆ ಸುರಿಸೋದು ನಿನ್ನ ಕರ್ತವ್ಯ ತಾನೆ? ನಿನ್ನ ಕರ್ತವ್ಯ ಮಾಡೋದು ಬಿಡೋದು ನಿನಗೆ ಸೇರಿದ್ದು. ನನಗೆ ಕೆಲಸ ಇದೆ, ಬರ್ತೀನಿ" ಎಂದು ಹೇಳಿ ಹೊರಟನು.

ಮೋಡಕ್ಕೆ ಅವನ ಮಾತುಗಳಿಂದ ಸಂತೋಷವಾಯಿತು. ಅವನ ಕರ್ತವ್ಯಶ್ರದ್ಧೆಗೆ ಮೆಚ್ಚಿ ಉಳುಮೆ ಮಾಡಿದ್ದ ಭೂಮಿಯ ಸುತ್ತ ಸಾಕಷ್ಟು ಮಳೆ ಸುರಿಸಿತು. ಭೂಮಿ ಹದವಾಗಿ ಆ ವರ್ಷ ರೈತನಿಗೆ ಒಳ್ಳೆಯ ಫಸಲು ದೊರೆಯಿತು.

ನೀತಿ: ತನ್ನ ಕರ್ತವ್ಯವನ್ನು ಮಾಡಿದವನಿಗೆ ಒಳ್ಳೆಯ ಪ್ರತಿಫಲ ದೊರೆಯುವುದು.

ಸಂಗ್ರಹ: ವಿರೂಪಾಕ್ಷಪ್ಪ



ಕಲೆ: ಶ್ರೀಕಾಂತ ಆಚಾರ್ಯ